ಶೋಗಳಲ್ಲಿ ಪಾಲ್ಗೊಂಡೆ. ಹಾಗೆಯೇ ಫೋಟೋಶೂಟ್‌ಗಳಲ್ಲಿಯೂ ಕಾಣಿಸಿಕೊಂಡೆ. ಇದರ ಜೊತೆಗೆ ನಟನೆಯ ಕುರಿತು ತರಬೇತಿ ಪಡೆದುಕೊಳ್ಳಬೇಕು ಅನಿಸಿತು. ಹಾಗಾಗಿ ಮಾಲೂರು ಶ್ರೀನಿವಾಸ್ ಅವರ 'ನವರಸ ಫಿಲ್ಮ್ ಅಕಾಡೆಮಿ'ಯಲ್ಲಿ ವಾರಾಂತ್ಯದ ನಟನಾತರಗತಿಗೆ ಸೇರಿಕೊಂಡೆ. ಅಲ್ಲಿಗೆ ಸೇರಿಕೊಂಡು ಒಂದು ತಿಂಗಳಾಗಿರಬಹುದೇನೋ, ಆಗಲೇ ನನಗೆ ಲವ್ ಮಾಕ್ಟೇಲ್ ಸಿನಿಮಾ ಆಡಿಷನ್‌ಗೆ ಹೋಗುವಂತೆ ಮಾಲೂರು ಶ್ರೀನಿವಾಸ್ ಹೇಳಿದರು. ಹೋಗಿ ಆಡಿಷನ್‌ಲ್ಲಿ ಪಾಲ್ಗೊಂಡೆ. ಆಯ್ಕೆಯಾದೆ' ಎಂದು ತಮ್ಮ ನಟನಾಪಯಣದ ಮೊದಲ ಹೆಜ್ಜೆಯ ಕುರಿತು ಮಾತನಾಡುತ್ತಾರೆ ರಚನಾ.

ಲವ್ ಮಾಕ್ಟೇಲ್ ಸಿನಿಮಾದಿಂದ ಪಡೆದುಕೊಂಡ ಅನುಭವದ ಬಗ್ಗೆಯೂ ಅವರಲ್ಲಿ ಕೃತಜ್ಞತೆ ಇದೆ. "ಶೂಟಿಂಗ್ ಶುರುವಾಗುವ ಎರಡು ವಾರದ ಮೊದಲೆ ಡಾರ್ಲಿಂಗ್ ಕೃಷ್ಣ ಅವರ ಮನೆಯಲ್ಲಿ ಸೀನ್ ಪ್ರಾಕ್ಟೀಸ್ ಮಾಡುತ್ತಿದ್ದೆವು. ಅಲ್ಲದೇ ನನಗೆ ಚಿತ್ರತಂಡವೂ ಚೆನ್ನಾಗಿ ಪರಿಚಯವಾಗಿಬಿಟ್ಟಿತ್ತು. 'ಕ್ಯಾಮೆರಾ ಇದೆ ಎಂದು ಮನಸ್ಸಿಗೆ ತೆಗೆದುಕೊಳ್ಳಬೇಡ. ನಿನ್ನ ಪಾಡಿಗೆ ನೀನು ರಿಹರ್ಸಲ್ ಅಂದುಕೊಂಡೇ ಆಕ್ಟ್ ಮಾಡ್ತಾ ಹೋಗು' ಎಂದು ಕೃಷ್ಣ ಹೇಳಿದ್ದರು. ಹಾಗೆಯೇ ಮಾಡಿದೆ. ನನಗೆ ಶೂಟ್ ಮಾಡಿದ್ದೇ ಗೊತ್ತಾಗಲಿಲ್ಲ" ಎಂದು ಜೋರಾಗಿ ನಗುತ್ತಾರೆ ಅವರು.

ನಟನೆ ಎಂಬುದು ರಚನಾ ಬದುಕಿನ ಹೆಬ್ಬಯಕೆ ಎನ್ನುವುದೇನೋ ನಿಜ. ಆದರೆ ಅದಕ್ಕೋಸ್ಕರ ಅವರ ವಿದ್ಯಾಭ್ಯಾಸವನ್ನು ತ್ಯಜಿಸಲು ಅಥವಾ ಕಡೆಗಣಿಸಲು ಅವರಿಗೆ ಕೊಂಚವೂ ಇಷ್ಟವಿಲ್ಲ. ಹೀಗಾಗಿಯೇ ಲವ್ ಮಾಕ್ಟೇಲ್ ಸಿನಿಮಾವನ್ನೂ ಸೆಮಿಸ್ಟರ್ ನಡುವಿನ ರಜದಲ್ಲಿಯೇ ಅವರು ಮುಗಿಸಿದ್ದಾರೆ. ಲಾಕ್‌ಡೌನ್ ಸಮಯದಲ್ಲಿಯೂ ಕಾಲೇಜಿನ ಆನ್‌ಲೈನ್ ಕ್ಲಾಸ್ ಅಟೆಂಡ್ ಆಗುತ್ತ, ಅಸೈನ್‌ಮೆಂಟುಗಳನ್ನು ಮುಗಿಸುತ್ತ, ಎಕ್ಸಾಮ್ ಯಾವಾಗ ಬರುತ್ತದೆಯೋ ಎಂದು ಟೆನ್ಶನ್ ಮಾಡಿಕೊಳ್ಳುತ್ತ ಕೂಡುವಷ್ಟು ಸಿನ್ಸಿಯರ್ ವಿದ್ಯಾರ್ಥಿನಿ ಅವರು! ಹಾಗಂತ ವಿದ್ಯಾಭ್ಯಾಸ ಮುಗಿಸಿ ಸಂಬಳದ ನೌಕರಿಗೇನೂ ಹೋಗುವ ಆಲೋಚನೆ ಅವರಿಗಿಲ್ಲ. 'ವಿದ್ಯೆ ಕಲಿಯುವಾಗ ಸರಿಯಾಗಿ ಕಲಿಯಬೇಕು. ನಂತರ ನಟನೆಗೇ ಬರುತ್ತೇನೆ' ಎನ್ನುವುದು ಅವರ ಸ್ಪಷ್ಟನುಡಿ.

ಚಿತ್ರಕಲೆಯಲ್ಲಿಯೂ ಆಸಕ್ತಿ ಇರುವ ರಚನಾ ಅವರಿಗೆ, ಪೆನ್ಸಿಲ್‌ಸ್ಕೆಚ್‌ನಲ್ಲಿ ಮನಸ್ಸಿನ ಕಲ್ಪನೆಗೆ ರೂಪುನೀಡುವುದು ಅಚ್ಚುಮೆಚ್ಚಿನ ಹವ್ಯಾಸ. ಡಾನ್ಸ್ ಬಗ್ಗೆಯೂ ಅಷ್ಟೇ ಆಸಕ್ತಿ ಇದೆ.

ಮೊದಲ ಚಿತ್ರಕ್ಕೆ ಬಂದಿರುವ ಪ್ರತಿಸ್ಪಂದನ ರಚನಾ ಅವರಲ್ಲಿನ ಮಹತ್ವಾಕಾಂಕ್ಷೆಯ ರಾಕೆಟ್‌ಗೆ ಸಾಕಷ್ಟು ಇಂಧನ ತುಂಬಿದೆ. ಜೊತೆಗೆ ಒಂದಿಷ್ಟು ಅವಕಾಶಗಳೂ ಅವರನ್ನು ಅರಸಿ ಬರಲು ಶುರುವಾಗಿವೆ.

'ಮೂರು ಸಿನಿಮಾಗಳಲ್ಲಿ ನಟಿಸುವ ಅವಕಾಶ ಬಂದಿದೆ. ಆದರೆ ನಾನಿನ್ನೂ ಸಹಿ ಮಾಡಿಲ್ಲ. ಅಷ್ಟರಲ್ಲಿ ಲಾಕ್‌ಡೌನ್ ಬೇರೆ ಘೋಷಣೆಯಾಯ್ತು. ಎಲ್ಲವೂ ಖಚಿತವಾದ ಮೇಲೆ ನಾನೇ ಹೇಳ್ತೇನೆ' ತಮ್ಮ ಮುಂದಿನ ಸಿನಿಮಾಗಳ ಬಗ್ಗೆ ಗುಟ್ಟನ್ನು ಬಿಟ್ಟುಕೊಡದ ಈ ತುಂಟಕಣ್ಣಿನ ಹುಡುಗಿಯಲ್ಲಿ, ಆಕಾಶಕ್ಕೆ ನೆಗೆದು ತಾರೆಗಳ ಮುಟ್ಟಿ ಹೊಳಪ ಗಿಟ್ಟಿಸಿಕೊಳ್ಳುವಷ್ಟು ಉತ್ಸಾಹವಂತೂ ಇದೆ. ■



# ಯುವ ವಿನಯ ಉತ್ಸಾಹ

ರಾಜ್‌ಕುಮಾರ್ ಕುಟುಂಬದ ಮೂರನೇ ತಲೆಮಾರು ವಿನಯ್ ರಾಜ್‌ಕುಮಾರ್ ಮೂಲಕ ಚಿತ್ರರಂಗಕ್ಕೆ ಪ್ರವೇಶ ಮಾಡಿತ್ತು. ಆಕಸ್ಮಿಕ, ಅನುರಾಗ ಅರಳಿತು, ಒಡಹುಟ್ಟಿದವರು, ಓಂ ಸಿನಿಮಾಗಳಲ್ಲಿ ಬಾಲಕಲಾವಿದನಾಗಿ ನಟಿಸಿದ್ದ ವಿನಯ್ ರಾಜ್‌ಕುಮಾರ್ 2015ರಲ್ಲಿ 'ಸಿದ್ಧಾರ್ಥ' ಸಿನಿಮಾದ ಮೂಲಕ ನಾಯಕನಾಗಿ ಬೆಳ್ಳಿತೆರೆಯ ಆವರಣದಲ್ಲಿ ಅಡಿಯಿಟ್ಟರು. ಆದರೆ ರಾಜ್ ಮಕ್ಕಳಿಗೆ ಸಿಕ್ಕಷ್ಟು ಅಭೂತಪೂರ್ವ ಸ್ವಾಗತವೇನೂ ವಿನಯ್‌ಗೆ ಸಿಗಲಿಲ್ಲ. ಇದುವರೆಗೆ ವಿನಯ್ ಅಭಿನಯದ ಮೂರು ಸಿನಿಮಾಗಳು ತೆರೆಕಂಡಿವೆ. ಆದರೆ ಯಾವುದೂ ವಾಣಿಜ್ಯಾತ್ಮಕವಾಗಿ ಸೂಪರ್ ಹಿಟ್ ಆಗಲಿಲ್ಲ. ವಿನಯ್ ನಟನಾಗಿ ಕ್ರೇಜ್ ಹುಟ್ಟಿಸಲಿಲ್ಲ. ಆದರೆ ಈ ಸೋಲು ಅವರನ್ನೇನೂ ಕಂಗೆಡಿಸಿದಂತಿಲ್ಲ. ಜನರು ತನ್ನನ್ನು ಒಪ್ಪಿಕೊಂಡೇ ಒಪ್ಪಿಕೊಳ್ಳುತ್ತಾರೆ ಎಂಬ ವಿಶ್ವಾಸ ಅವರ ಸಿನಿಮಾಗಳ ಆಯ್ಕೆಯಲ್ಲಿಯೇ ಕಾಣಿಸುತ್ತದೆ. ಸೋಲು ಗೆಲುವುಗಳ ಆಚೆ ನಿಂತು ನೋಡಿದರೆ ವಿನಯ್ ಆಯ್ದುಕೊಂಡು ನಟಿಸಿರುವ ಸಿನಿಮಾಗಳಲ್ಲಿ ವೈವಿಧ್ಯವಿದೆ. 'ಅನಂತು ವರ್ಸಸ್ ನಸ್ರುತ್' ಅಂಥ ಪ್ರಯೋಗಾತ್ಮಕ ಚಿತ್ರಗಳೂ ಇವೆ.

ಈಗ ವಿನಯ್ ತಮ್ಮ ಯುವರಾಜ್‌ಕುಮಾರ್ ಕೂಡ ರಂಗಪ್ರವೇಶಕ್ಕೆ ಸಜ್ಜಾಗಿದ್ದಾರೆ. 'ಕೆಜಿಎಫ್' ಚಿತ್ರದಲ್ಲಿ ಪ್ರಶಾಂತ್ ನೀಲ್‌ಗೆ ಸಹಾಯಕರಾಗಿ ಕೆಲಸ ಮಾಡಿದ್ದ ಪುನೀತ್ ರುದ್ರನಾಗ್, ಯುವ ಅವರ ಸಿನಿಮಾಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಅಣ್ಣನಲ್ಲಿ ಹೆಸರಿಗೆ ತಕ್ಕಂತೆ ವಿನಯ ಮತ್ತು ಸೌಮ್ಯಭಾವವೇ ಎದ್ದು ಕಾಣುತ್ತಿದ್ದರೆ ತಮ್ಮನಲ್ಲಿ ಯುವೋತ್ಸಾಹ ತುಂಬಿ ತುಳುಕುತ್ತಿದೆ. ಅದು ಪುನೀತ್ ರಾಜ್‌ಕುಮಾರ್ ಅವರ 'ಯುವರತ್ನ' ಸಿನಿಮಾದ ಕಾರ್ಯಕ್ರಮವೊಂದರಲ್ಲಿ ಯುವರಾಜ್ ಮಾಡಿದ ಡಾನ್ಸ್ ನೋಡಿ ಸ್ವತಃ ಪುನೀತ್ ಅವರೇ ಬೆರಗಿನಿಂದ ಬೆನ್ನುತಟ್ಟಿದ್ದರು. ಈಗ ಚಿತ್ರರಂಗ ಪ್ರವೇಶಕ್ಕೆ ಅಣಿಯಾಗಿರುವ ಅವರ ಜೋಷ್ ಹೊಸ ತಲೆಮಾರಿನವರಿಗೆ ಕನೆಕ್ಟ್ ಆದರೆ ಸಾಕು; ಸ್ಟಾರ್ ಪಟ್ಟ ಅವರಿಗೆ ದೂರವೇನೂ ಇಲ್ಲ.

ಏ. 24ಕ್ಕೆ ರಾಜ್‌ಕುಮಾರ್ ಜನ್ಮದಿನದಂದು ಯುವರಾಜ್ ಅವರ ಮೊದಲ ಸಿನಿಮಾ ಫಸ್ಟ್ ಲುಕ್ ರಿಲೀಸ್ ಆಗಿತ್ತು. ಅದಕ್ಕೆ ಸಾಕಷ್ಟು ಪ್ರತಿಕ್ರಿಯೆಯೂ ದೊರಕಿತ್ತು. ಕೈಯಲ್ಲಿ ಭರ್ಜಿ ಹಿಡಿದುಕೊಂಡು ಬಾಗಿಲೊಂದರ ಮುಂದೆ ರಗಡ್ ಲುಕ್‌ನಲ್ಲಿ ನಿಂತಿರುವ ಪೋಸ್ಟರ್ ಇದೊಂದು ಆ್ಯಕ್ಷನ್ ಪ್ರಧಾನ ಸಿನಿಮಾ ಅನ್ನುವುದನ್ನು ಹೇಳುವಂತಿತ್ತು.

ಮೇ 7ಕ್ಕೆ ವಿನಯ ರಾಜ್‌ಕುಮಾರ್ ನಾಯಕನಾಗಿ ನಟಿಸುತ್ತಿರುವ 'ಗ್ರಾಮಾಯಣ' ಸಿನಿಮಾದ ಪೋಸ್ಟರ್ ಕೂಡ ರಿಲೀಸ್ ಆಗಿದೆ. ವರ್ಷದ ಹಿಂದೆಯೇ ಆರಂಭವಾದ 'ಗ್ರಾಮಾಯಣ' ನಿರ್ಮಾಪಕರ ಸಮಸ್ಯೆಯಿಂದ ಸ್ಥಗಿತವಾಗಿತ್ತು. ಈಗ ಮತ್ತೆ ಎಲ್ಲ ಅಡೆತಡೆಗಳನ್ನು ನಿವಾರಿಸಿಕೊಂಡು ನಿರ್ಮಾಣದ ಹಂತದಲ್ಲಿದೆ. ಹಳ್ಳಿ ಜೀವನದ ಕಥೆಯನ್ನು ಆಧರಿಸಿದ ಈ ಚಿತ್ರ, ಟೀಸರ್ ಲಾಂಚ್ ಕಾರ್ಯಕ್ರಮದಲ್ಲಿಯೇ ಹಳ್ಳಿ ಸೊಗಡಿನ ಆಪ್ತ ವಿಡಿಯೊ ಬಿಡುಗಡೆ ಮಾಡುವ ಮೂಲಕ ಗಮನಸೆಳೆದಿತ್ತು.



ರಾಜ್ ಕುಟುಂಬದ ಮೂರನೇ ತಲೆಮಾರಿನ ಇಬ್ಬರು ನಟರು, ಕೆಲವೇ ದಿನಗಳಲ್ಲಿ ಭಿನ್ನವಾದ ಚಿತ್ರಗಳ ಮೂಲಕ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಅವರನ್ನು ಜನರು ಹೇಗೆ ಸ್ವೀಕರಿಸುತ್ತಾರೆ ಎನ್ನುವುದನ್ನು ಕಾದು ನೋಡಬೇಕಷ್ಟೆ. ■